ಗಣತಿ ಆಧಾರಿತ ರಾಜ್ಯ ಸಾಧನ ಸಮೀಕ್ಷೆ
ಅಕ್ಟೋಬರ್-2017

(CSAS)

7 ನೇ ತರಗತಿ

ಕೋರ್ ವಿಷಯುಗಳ ಮಾದರಿ ಪ್ರಶ್ನೆ ಪತ್ರಿಕೆ ನಮೂನೆ

(ಕೇವಲ ಅಭ್ಯಾಸಕ್ಕಾಗಿ,ಬದಲಾವಣೆಗೆ ಒಳಪಟ್ಟಿದೆ)

ವಿನ್ಯಾಸ ಇಂದ

ಅಂಜು ಸಕಲೇಶಪುರ

ಸಿ.ಆರ್.ಪಿ ಬೆಳಗೋಡು

ಸಕಲೇಶಪುರ

ಭಾಗ್ಯಲಕ್ಷ್ಮೀ ಸಿ.ಎಸ್

ಸಹಶಿಕ್ಷಕರು ಅರಸೀಕೆರೆ

ಪ್ರಶ್ನೆಗಳ ತಯಾರಕರು

ಪಲ್ಲವಿ ಬಾಗೆ,ಸೀಮಾರಾಣಿ ಬೆಳಗೋಡು

ಸಹ ಶಿಕ್ಷಕರು

ಬೆಳಗೋಡು ಕ್ಲಸ್ಟರ್

e-BRC SKP

Use E-Papers, Save Trees

above line hide when print out-www.inyatrust.com

ವಿಜ್ಞಾನ

==

1. ಈ ಆಹಾರದ ಘಟಕಗಳು ತಾಪ ನಿಯಂತ್ರಕಗಳಾಗಿ ಕೆಲಸ ಮಾಡುತ್ತವೆ_________________

A.ಕಾರ್ಬೋಹೈಡ್ರೇಟ್‌ಗಳು

B.ಪ್ರೊಟೀನ್‌ಗಳು

C.ಕೊಬ್ಬುಗಳು

D.ನಾರು ಪದಾರ್ಥಗಳು

2. ನೈಜ ಕೋಶಕೇಂದ್ರವು ಈ ಜೀವಕೋಶದಲ್ಲಿ ಇರುತ್ತದೆ.

A.ಪ್ರೋಕ್ಯಾರಿಯೋಟಿಕ್ ಜೀವಕೋಶ

B.ಬ್ಯಾಕ್ಟೀರಿಯಾ ಜೀವಕೋಶ

C.ವೈರಸ್

D.ಯೂಕ್ಯಾರಿಯೋಟಿಕ್ ಜೀವಕೋಶ

3. ಘರ್ಷಣಾಬಲವು ಯಾವಾಗಲೂ ಚಲನೆಯ ____________ ದಿಕ್ಕಿನಲ್ಲಿ ವರ್ತಿಸುತ್ತದೆ

A.ವಿರುದ್ಧ

B.ನೇರ

C.ಎಡ

D.ಬಲ

4. ಪರಿಮಾಣ ಮತ್ತು ದಿಕ್ಕು ಎರಡನ್ನೂ ಹೊಂದಿರುವ ಭೌತಿಕ ಪರಿಮಾಣ.

A ಕಾಲ

B ವೇಗೋತ್ಕರ್ಷ

C.ಜವ

D.ಚಲಿಸಿದ ದೂರ

5. ಕಾಯದ ಪ್ರಚ್ಛನ್ನ ಶಕ್ತಿಯು ಇದರಿಂದ ಹೆಚ್ಚಾಗುತ್ತದೆ

A ಕಾಯದ ರಾಶಿ

B ಕಾಯದ ಎತ್ತರ

C.ಕಾಯದ ರಾಶಿ ಮತ್ತು ಎತ್ತರ

D.ಕಾಯದ ವೇಗ

Use E-Papers, Save Trees
above line hide when print out-www.inyatrust.com

6. ಗುಂಪಿಗೆ ಸೇರದ ಪದವನ್ನು ಗುರ್ತಿಸಿ :

A .ಕಾರ್ಬನ್ ಡೈಆಕ್ಸೈಡ್

B .ಕಾರ್ಬನ್

C.ಹೈಡ್ರೋಜನ್

D.ಕಾರ್ಬನ್ ಮಾನಾಕ್ಸೈಡ್

7.ತಾಪದ ಅಂತಾರಾಷ್ಟ್ರೀಯ ಮಾನ ____________ .

A ಜೌಲ್

B ಸೆಲ್ಸಿಯಸ್

C.ಪ್ಯಾರನೀಟ್

D.ಕೆಲ್ವಿನ್

8. ಮಣ್ಣಿನಲ್ಲಿನ ಆಮ್ಲೀಯತೆಯನ್ನು ತಟಸ್ಥೀಕರಿಸಲು ರೈತರು ಬಳಸುವ ರಾಸಾಯನಿಕ

A ಕ್ಯಾಲ್ಸಿಯಮ್ ಆಕ್ಸೈಡ್

B ಕ್ಯಾಲ್ಸಿಯಮ್ ಹೈಡ್ರಾಕ್ಸೈಡ್

C.ಕ್ಯಾಲ್ಸಿಯಮ್ ಕಾರ್ಬೋನೇಟ್

D.ಕ್ಯಾಲ್ಸಿಯಮ್ ಕ್ಲೋರೈಡ್.

9. ಬೀಜಕೇಂದ್ರದಲ್ಲಿರುವ ಉಪ ಪರಮಾಣ್ವಕ ಕಣಗಳು

A ಇಲೆಕ್ಟ್ರಾನ್‌ಗಳು

B ಇಲೆಕ್ಟ್ರಾನ್‌ಗಳು ಮತ್ತು ನ್ಯೂಟ್ರಾನ್‌ಗಳು

C.ನ್ಯೂಟ್ರಾನ್‌ಗಳು ಮತ್ತು ಪ್ರೋಟಾನ್‌ಗಳು

D.ಪ್ರೋಟಾನ್‌ಗಳು ಮತ್ತು ಇಲೆಕ್ಟ್ರಾನ್‌ಗಳು

10. ಡ್ಯುಟೇರಿಯಮ್‌ನಲ್ಲಿರುವ ಪ್ರೋಟಾನ್‌ಗಳು, ನ್ಯೂಟ್ರಾನ್‌ಗಳು ಮತ್ತು ಇಲೆಕ್ಟ್ರಾನ್‌ಗಳ ಸಂಖ್ಯೆ

A. 1, 1, 1

B 1, 0, 2

C. 0, 1, 1

D. 1, 2, 3

Use E-Papers, Save Trees

above line hide when print out-www.inyatrust.com

11. ಗುಂಪಿಗೆ ಸೇರದ ಪದವನ್ನು ಗುರ್ತಿಸಿ :

A.ಹೈಡ್ರೋಜನ್,

B.ಹೀಲಿಯಮ್,

C.ಟ್ರೈಷಿಯಮ್,

D.ಡ್ಯುಟೇರಿಯಮ್

12. ಪ್ರಾಣಿಜನ್ಯ ಕಾರ್ಬೋಹೈಡ್ರೇಟ್‌ಗೆ ಒಂದು ಉದಾಹರಣೆ ____________

A.ಗ್ಲೋಕೋಸ್

B.ಸೆಲ್ಯೂಲೋಸ್

C.ಗ್ಲೈಕೋಜನ್

D.ಪೆಕ್ಟಿನ್

13. ಜೀವಕೋಶದ ಎಲ್ಲಾ ಚಟುವಟಿಕೆಗಳನ್ನು ನಿಯಂತ್ರಿಸುವ ಮತ್ತು ಸಂಯೋಜಿಸುವ ಭಾಗ ______________

A.ಮೈಟೋಕಾಂಡ್ರಿಯಾ

B.ಕೋಶಕೇಂದ್ರ

C.ರೈಬೋಸೋಂ

D.ಗಾಲ್ಗಿ ಸಂಕೀರ್ಣ

14. ಕಾಯದ ಈ ಸ್ಥಿತಿಯಲ್ಲಿ ಕೆಲಸ ನಡೆದಿದೆ ಎನ್ನಬಹುದು_______

A.ವಿಶ್ರಾಂತ ಸ್ಥಿತಿ

B.ಬಲದ ನೇರದಲ್ಲಿ ಸ್ಥಾನ ಪಲ್ಲಟ

C.ಬಲದ ವರ್ತನೆಯಲ್ಲೂ ಕಾಯದ ವಿಶ್ರಾಂತಿ

D.ಪರಸ್ಪರ ಸಮ ಹಾಗೂ ವಿರುದ್ಧವಾದ ಎರಡು ಬಲಗಳ ನಡುವಣ ಕಾಯ

15. **ದ್ರವ ವಸ್ತುಗಳು ತಮ್ಮ ಆಕಾರವನ್ನು ಬದಲಾಯಿಸುವ ಸಾಮರ್ಥ್ಯವನ್ನು ಹೊಂದಿವೆ**. ಈ ಹೇಳಿಕೆ ಪ್ರಬಲ ಕಾರಣ___

A .ದ್ರವದ ಅಣುಗಳ ನಡುವೆ ಪ್ರಬಲ ಆಕರ್ಷಣಾ ಬಲವಿದೆ

B.ದ್ರವದ ಅಣುಗಳ ನಡುವೆ ಅತಿ ದುರ್ಬಲ ಆಕರ್ಷಣಾ ಬಲವಿದೆ

C.ದ್ರವಗಳಿಗೆ ನಿರ್ದಿಷ್ಟ ಆಕಾರವಿಲ್ಲ

D.ದ್ರವಗಳಿಗೆ ನಿರ್ದಿಷ್ಟ ಆಕಾರವಿದೆ.

Use E-Papers, Save Trees
above line hide when print out-www.inyatrust.com

16. ಈ ಚಿತ್ರವು ಯಾವ ಶಕ್ತಿಯ ಯಾವ ವಿಧವನ್ನು ಪ್ರತಿನಿಧಿಸುತ್ತದೆ.



A.ಚಲನಶಕ್ತಿ

B.ವಿಭವಶಕ್ತಿ

C.ಪ್ರಚ್ಛನ್ನಶಕ್ತಿ

D..ಸೌರಶಕ್ತಿ

17. ಹೈಡ್ರೋಕ್ಲೋರಿಕ್ ಆಮ್ಲವನ್ನು ಇದರಲ್ಲಿ ಬಳಸಲಾಗುತ್ತದೆ. ______________________

A ಚಿನ್ನದಂತಹ ಬೆಲೆಬಾಳುವ ಲೋಹಗಳ ಶುದ್ಧೀಕರಣ

B.ಪೆಟ್ರೋಲ್‌ನ ಸಂಸ್ಕರಣೆ

C.ಸಾಮಾನ್ಯ ಲವಣದ ಶುದ್ಧೀಕರಣ

D.ಪಾನೀಯಗಳ ತಯಾರಿಕೆ

18. ಇಲೆಕ್ಟ್ರಾನ್ ಎಂದು ಹೆಸರಿಸಿದ ವಿಜ್ಞಾನಿ _______________

A ಜೆ.ಜೆ. ಥಾಮ್ಸನ್

B.ಜಾನ್ ಡಾಲ್ಟನ್

C.ಕಣಾದ

D.ಜೇಮ್ಸ ಚಾಡ್‌ವಿಕ್

19.ಘರ್ಷಣೆಯ ಇಳಿಕೆ ಕ್ರಮದಲ್ಲಿ ಸರಿಯಾದ ಜೋಡಣೆ ____________________

A ಉರುಳು ಘರ್ಷಣೆ, ಸ್ಥಾಯಿ ಘರ್ಷಣೆ, ಜಾರು ಘರ್ಷಣೆ.

B.ಉರುಳು ಘರ್ಷಣೆ, ಜಾರು ಘರ್ಷಣೆ, ಸ್ಥಾಯಿ ಘರ್ಷಣೆ.

C.ಜಾರು ಘರ್ಷಣೆ, ಸ್ಥಾಯಿ ಘರ್ಷಣೆ, ಉರುಳು ಘರ್ಷಣೆ.

D.ಸ್ಥಾಯಿ ಘರ್ಷಣೆ, ಜಾರು ಘರ್ಷಣೆ, ಉರುಳು ಘರ್ಷಣೆ.

20. 20 N ಬಲ ಪ್ರಯೋಗದಿಂದ ಒಂದು ಮೇಜನ್ನು 8.5 m ದೂರದವರೆಗೆ ತಳ್ಳಿದರೆ, ನಡೆದ ಕೆಲಸದ ಪ್ರಮಾಣವನ್ನು ಲೆಕ್ಕ ಹಾಕಿ.

A.170 ಜೌಲ್

B.28.5 ಜೌಲ್

Use E-Papers, Save Trees
above line hide when print out-www.inyatrust.com

C.200 ಜೌಲ್

D.85 ಜೌಲ್

21.ಪ್ರತ್ಯಾಮ್ಲಗಳ ಭೌತಿಕ ಗುಣಗಳ ಪಟ್ಟಿಯನ್ನು ಆಯ್ಕೆ ಮಾಡಿ.

A **ಪಟ್ಟಿ** –1

1. **ರುಚಿ** : ಪ್ರತ್ಯಾಮ್ಲಗಳು ಕಹಿ ರುಚಿಯನ್ನು ಹೊಂದಿರುತ್ತವೆ.
2. **ಸ್ಪರ್ಶ** : ಪ್ರತ್ಯಾಮ್ಲಗಳನ್ನು ಮುಟ್ಟಿದಾಗ ಸೋಪಿನಂತೆ ಭಾಸವಾಗುತ್ತದೆ.
3. **ವಾಹಕತ್ವ** : ಪ್ರತ್ಯಾಮ್ಲಗಳ ದ್ರಾವಣಗಳು ಉತ್ತಮ ವಿದ್ಯುತ್‌ವಾಹಕಗಳಾಗಿವೆ.
4. **ಸಂಕ್ಷಾರಕತ್ವ** : ಕೆಲವು ಪ್ರತ್ಯಾಮ್ಲಗಳು ಸಂಕ್ಷಾರಕಗಳಾಗಿವೆ.

B.**ಪಟ್ಟಿ** –2

1. **ರುಚಿ** : ಪ್ರತ್ಯಾಮ್ಲಗಳು ಹುಳಿ ರುಚಿಯನ್ನು ಹೊಂದಿರುತ್ತವೆ.
2. **ಸ್ಪರ್ಶ** : ಪ್ರತ್ಯಾಮ್ಲಗಳನ್ನು ಮುಟ್ಟಿದಾಗ ಸೋಪಿನಂತೆ ಭಾಸವಾಗುತ್ತದೆ.
3. **ವಾಹಕತ್ವ** : ಪ್ರತ್ಯಾಮ್ಲಗಳ ದ್ರಾವಣಗಳು ಉತ್ತಮ ವಿದ್ಯುತ್‌ವಾಹಕಗಳಾಗಿವೆ.
4. **ಸಂಕ್ಷಾರಕತ್ವ** : ಕೆಲವು ಪ್ರತ್ಯಾಮ್ಲಗಳು ಸಂಕ್ಷಾರಕಗಳಾಗಿವೆ.

C.**ಪಟ್ಟಿ** –3

1. **ರುಚಿ** : ಪ್ರತ್ಯಾಮ್ಲಗಳು ಕಹಿ ರುಚಿಯನ್ನು ಹೊಂದಿರುತ್ತವೆ.
2. **ಸ್ಪರ್ಶ** : ಪ್ರತ್ಯಾಮ್ಲಗಳನ್ನು ಮುಟ್ಟಿದಾಗ ಸೋಪಿನಂತೆ ಭಾಸವಾಗುತ್ತದೆ.
3. **ವಾಹಕತ್ವ** : ಪ್ರತ್ಯಾಮ್ಲಗಳ ದ್ರಾವಣಗಳು ಉತ್ತಮ ವಿದ್ಯುತ್‌ಅವಾಹಕಗಳಾಗಿವೆ.
4. **ಸಂಕ್ಷಾರಕತ್ವ** : ಕೆಲವು ಪ್ರತ್ಯಾಮ್ಲಗಳು ಸಂಕ್ಷಾರಕಗಳಾಗಿವೆ.

D .**ಪಟ್ಟಿ** –4

1. **ರುಚಿ** : ಪ್ರತ್ಯಾಮ್ಲಗಳು ಹುಳಿ ರುಚಿಯನ್ನು ಹೊಂದಿರುತ್ತವೆ.
2. **ಸ್ಪರ್ಶ** : ಪ್ರತ್ಯಾಮ್ಲಗಳನ್ನು ಮುಟ್ಟಿದಾಗ ಹರಳಿನಂತೆ ಭಾಸವಾಗುತ್ತದೆ.
3. **ವಾಹಕತ್ವ** : ಪ್ರತ್ಯಾಮ್ಲಗಳ ದ್ರಾವಣಗಳು ಉತ್ತಮ ವಿದ್ಯುತ್ ವಾಹಕಗಳಾಗಿವೆ.
4. **ಸಂಕ್ಷಾರಕತ್ವ** : ಕೆಲವು ಪ್ರತ್ಯಾಮ್ಲಗಳು ಸಂಕ್ಷಾರಕಗಳಾಗಿವೆ.

22.. ಕೆಳಗಿನ ಸಂದರ್ಭಗಳಲ್ಲಿ ಏನಾಗುತ್ತದೆ ಎಂದು ತಿಳಿಸಿ

ಯಾವಾಗಲೂ ಗಡುಸು ನೀರಿನಿಂದ ಪಾತ್ರೆಗಳನ್ನು ತೊಳೆದಾಗ

A.ಪಾತ್ರೆಗಳನ್ನು ಗಡುಸು ನೀರಿನಿಂದ ತೊಳೆದಾಗ, ಕಾಂತಿಯನ್ನು ಕಳೆದುಕೊಳ್ಳುತ್ತವೆ. ಈ .ಪಾತ್ರೆಗಳು ಕಾಂತಿಹೀನ ಹಾಗೂ ಕೊಳಕಾಗಿ ಕಾಣುತ್ತವೆ.

B.ಪಾತ್ರೆಗಳನ್ನು ಗಡುಸು ನೀರಿನಿಂದ ತೊಳೆದಾಗ, ಕಾಂತಿಯನ್ನು ಪಡೆದುಕೊಳ್ಳುತ್ತವೆ. ಈ ಪಾತ್ರೆಗಳು ಕಾಂತಿಯುತವಾಗಿ ಹಾಗೂ ನಯವಾಗಿ ಕಾಣುತ್ತವೆ.

C.ಪಾತ್ರೆಗಳನ್ನು ಗಡುಸು ನೀರಿನಿಂದ ತೊಳೆದಾಗ, ಕಾಂತಿಯನ್ನು ಪಡೆದುಕೊಳ್ಳುತ್ತವೆ. ಈ

Use E-Papers, Save Trees
above line hide when print out-www.inyatrust.com

ಪಾತ್ರೆಗಳು ಕಾಂತಿಹೀನ ಹಾಗೂ ಕೊಳಕಾಗಿ ಕಾಣುತ್ತವೆ.

D.ಪಾತ್ರೆಗಳನ್ನು ಗಡುಸು ನೀರಿನಿಂದ ತೊಳೆದಾಗ, ಕಾಂತಿಯನ್ನು ಕಳೆದುಕೊಳ್ಳುತ್ತವೆ. ಈ ಪಾತ್ರೆಗಳು ಕಾಂತಿಯುತ ಹಾಗೂ ಸ್ವಚ್ಛವಾಗಿ ಕಾಣುತ್ತವೆ.

23. ಈ ಚಿತ್ರದ ಭಾಗಗಳನ್ನು ಕ್ರಮವನ್ನು ಆಧರಿಸಿ ಗುರುತಿಸಿ ಆಯ್ಕೆ ಮಾಡಿ.



A.ಪಾದರಸ ಬುರುಡೆ, ವಕ್ರತೆ, ಅಳತೆಪಟ್ಟಿ ,ಗಾಜಿನ ಬುರುಡೆ

B.ಪಾದರಸ ಬುರುಡೆ, ವಕ್ರತೆ, ಅಳತೆಪಟ್ಟಿ, ಗಾಜಿನ ಬುರುಡೆ

C,ಗಾಜಿನ ಬುರುಡೆ, ,ಅಳತೆಪಟ್ಟಿ .ಪಾದರಸ ಬುರುಡೆ, ವಕ್ರತೆ

D.ಪಾದರಸ ಬುರುಡೆ, ,ಗಾಜಿನ ಬುರುಡೆ, ವಕ್ರತೆ, ಅಳತೆಪಟ್ಟಿ

24. ಈ ಪ್ರಯೋಗದ ಚಿತ್ರವು ಘನ ವಸ್ತುಗಳು ಯಾವ ಗುಣವನ್ನು ಪ್ರತಿನಿಧಿಸುತ್ತದೆ.



A.ಘನ ವಸ್ತುಗಳು ಭಾರವಾಗಿದ್ದು ಮತ್ತು ಬಳೆಯೊಳಗೆ ನುಸುಳುತ್ತವೆ

B.ಘನ ವಸ್ತುಗಳು ಹಗುರವಾಗಿದ್ದು ಮತ್ತು ಬಳೆಯೊಳಗೆ ನುಸುಳುತ್ತವೆ

C.ಘನ ವಸ್ತುಗಳು ಶಾಖ ನೀಡಿದಾಗ ವಿಕಸನ ಹೊಂದುತ್ತವೆ.

D.ಘನ ವಸ್ತುಗಳು ಶಾಖ ನೀಡಿದಾಗ ಬಳೆಯೊಳಗೆ ನುಸುಳುತ್ತವೆ

Use E-Papers, Save Trees
above line hide when print out-www.inyatrust.com